ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಕಾಲಜ್ಞಾನಿ ಅಂಬೇಡ್ಕರ್

ಓದು, ಅರ್ಥಶಾಸ್ತ್ರ, ಸಂಸ್ಕೃತ, ಕಾನೂನಿನಲ್ಲಿ ಪಡೆದ ತರಬೇತಿ ಅಂಬೇಡ್ಕರ್ ಅವರನ್ನು ಸಂತುಲಿತ ಪಂಡಿತರನ್ನಾಗಿ ತಯಾರು ಮಾಡಿತ್ತು. ವಿವಿಧ ದೇಶಗಳ ಅರ್ಥಪದ್ಧತಿ, ಕಾನೂನಿನ ಪದ್ಧತಿ, ಸಂವಿಧಾನದ ಸಂರಚನೆ ಮತ್ತು ಅನುಷ್ಠಾನದ ಬಗ್ಗೆ ಅವರಿಗೆ ವಿಸ್ತಾರವಾದ ಜ್ಞಾನವಿತ್ತು. ನಮ್ಮ ದೇಶದ ಸಂವಿಧಾನ ಸಭೆಯ ಅಧ್ಯಕ್ಷತೆಯನ್ನು ಬಾಬಾಸಾಹೇಬರು ವಹಿಸಿದ್ದು ನಮ್ಮ ಭಾಗ್ಯ.

ಬಾಬಾಸಾಹೇಬ್ ಅಂಬೇಡ್ಕರ್ ಬಗ್ಗೆ ಇತ್ತೀಚೆಗೆ ಬಂದಿರುವ ಹಲವು ಪುಸ್ತಕಗಳಲ್ಲಿ ಅನುರಾಗ್ ಭಾಸ್ಕರ್ ಅವರ 'ದ ಫೋರ್ಸ್ಯೆಟೆಡ್ ಅಂಬೇಡ್ಕರ್' ಹಲವು ಹೊಸ ಒಳನೋಟಗಳನ್ನು ಕೊಡುತ್ತದೆ. ಈಚೆಗೆ ಬಂದಿರುವ ಮುಖ್ಯ ಪುಸ್ತಕಗಳಲ್ಲಿ ಪ್ರಮುಖವಾದ ಅಶೋಕ್ ಗೋಪಾಲ್ ಅವರ 'ಎ ಪಾರ್ಟ್ ಅಪಾರ್ಟ್' ಪುಸ್ತಕ ಅಂಬೇಡ್ಕರ್ ಅವರ ಜೀವನವನ್ನು ಸಮಗ್ರವಾಗಿ ಗ್ರಹಿಸುತ್ತದೆ. ಅನುರಾಗ್ ಭಾಸ್ಕರ್ ಅವರ ಪುಸ್ತಕ ಈಚೆಗೆ ಬಂದಿರುವ ಪುಸ್ತಕಗಳ ಅಡಿಪಾಯದ ಮೇಲೆ ನಿಲ್ಲುತ್ತದೆ. ಅನುರಾಗ್, ಅಲಹಾಬಾದ್ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಕೆಲಸ ಮಾಡಿದ ಕಾನೂನಿನ ಆಳವಾದ ಅನುಭವದಿಂದ ಸಂವಿಧಾನದ ಕೆಲವು ಸೂಕ್ಷ್ಮಗಳನ್ನು ಗ್ರಹಿಸುವಲ್ಲಿ ಮತ್ತು ಅದಕ್ಕೆ ಬಾಬಾಸಾಹೇಬರ ಕೊಡುಗೆಯನ್ನು ಗುರುತಿಸುವಲ್ಲಿ ಸಫಲರಾಗುತ್ತಾರೆ. ಇದರಿಂದ ಬಾಬಾಸಾಹೇಬರ ಬಗೆಗೆ ನಮಗಿರುವ ಅರಿವು ವಿಸ್ತಾರಗೊಳ್ಳುತ್ತದೆ.

ಬಾಬಾಸಾಹೇಬರ ಜೀವನದಲ್ಲಿನ ಮಹತ್ವದ ಘಟ್ಟ ಭಾರತದ ಸಂವಿಧಾನ ಸಭೆಯ ಅಧ್ಯಕ್ಷತೆ ವಹಿಸಿ ಸಂವಿಧಾನ ರಚನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಎನ್ನುವುದು ವಿದಿತವೇ. ಸಂವಿಧಾನ ಸಂರಚನೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತಾದರೂ, ಅದರ ಅನೇಕ ಭಾಗಗಳ ಬಗ್ಗೆ ಬಾಬಾಸಾಹೇಬರಿಗೆ ಕೆಲವು ಅನುಮಾನ ಮತ್ತು ಭಿನ್ನಮತಗಳಿದ್ದವು. ಆದರೆ ಸಂವಿಧಾನ ಸಭೆಯ ಚರ್ಚೆ ಮತ್ತು ಒಟ್ಟಾರೆ ಒಪ್ಪಂದದ ವಾತಾವರಣದಲ್ಲಿ ರಾಜಿ ಮಾಡಿಕೊಳ್ಳಬೇಕಾಯಿತು. ಈ ಎಲ್ಲ ಸೂಕ್ಷ್ಮಗಳನ್ನು ಅನುರಾಗ್ ತಮ್ಮ ಪುಸ್ತಕದಲ್ಲಿ ಚರ್ಚಿಸುತ್ತಾರೆ.

ಜ್ಞಾನಪಿಪಾಸುವಾಗಿದ್ದ ಬಾಬಾಸಾಹೇಬರಿಗೆ ಎಲ್ಲ ರೀತಿಯಿಂದಲೂ ಈ ಕೆಲಸ ಮಾಡಲು ತಮ್ಮ ವಾರಗೆಯವರಿಗಿಂತ ಹೆಚ್ಚಿನ ಸಿದ್ಧತೆ ಮತ್ತು ಅರ್ಹತೆಯಿತ್ತು. ಮೇಲಾಗಿ ಜೀವನಾನುಭವವೂ ಇತ್ತು. ದಲಿತ ಸಮುದಾಯದಿಂದ ಬಂದದ್ದರಿಂದ ಮತ್ತು ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ಸ್ವತಃ ಅನುಭವಿಸಿದ್ದರಿಂದ, ಎಲ್ಲ ಸಮುದಾಯಗಳನ್ನು ಎಲ್ಲ ರೀತಿಯಿಂದಲೂ ಒಳಗೊಳ್ಳುವ ತುರ್ತಿನ ಬಗ್ಗೆ ಅವರಿಗಿದ್ದಷ್ಟು